20-1-2018 ಉದಯವಾಣಿ

## ಶ್ರೀ ವಿಷ್ಣು ಯುವಕ ಮಂಡಲ ವಾರ್ಷಿಕೋತ್ಸವ

# ಅಶ್ವತ್ಥ ಮರ ದೈವಿಕ ಶಕ್ತಿಗಳ ವಾಸಸ್ಥಾನ: ಶಕುಂತಳಾ ಶೆಟ್ಟಿ

**ಪುತ್ತೂರು** ಜ. 19: ಇಲ್ಲಿನ ಶ್ರೀ ವಿಷ್ಣು ಯುವಕ ಮಂಡಲದ ವತಿಯಿಂದ 21ನೇ ವರ್ಷದ ಸಾರ್ವಜನಿಕ ಶನೈಶ್ಚರ ಗೃಹ ವ್ರತ ಕಲ್ಪೋಕ್ತ ಪೂಜೆ ಹಾಗೂ ವಾರ್ಷಿಕೋತ್ಸವ ಕೆಮ್ಮಾಯಿ ಓಂ ಅಶ್ವತ್ಥಕಟ್ಟೆಯಲ್ಲಿ ನಡೆಯಿತು.

ಜಯರಾಮ ಜೋಯಿಷ ಅವರ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನ ನಡೆದ ಸಭಾ ಕಾರ್ಯಕ್ರಮದಲ್ಲಿ ಕಿರಣ್ ಕುಮಾರ್ ಪಡುಪಣಂಬೂರು ಧಾರ್ಮಿಕ ಉಪನ್ಯಾಸ ನೀಡಿದರು.

ರಾತ್ರಿ ನಡೆದ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕಿ ಶಕುಂತಳಾ ಶೆಟ್ಟಿ ಮಾತನಾಡಿ, ಪೂಜನೀಯ ಸ್ಥಾನದಲ್ಲಿರುವ ಅಶ್ವತ್ಥ ವೃಕ್ಷವನ್ನು ಪೂಜಿಸುವುದರಿಂದ ದೇವರನ್ನು ಪೂಜಿಸುವ ಫಲವಿದೆ. ಈ ಮರ ದೈವಿಕ ಶಕ್ತಿಗಳ ವಾಸಸ್ಥಾನ ಎಂದು ಪುರಾಣಗಳು ತಿಳಿಸುತ್ತವೆ. ನಂಬಿಕೆ, ಶ್ರದ್ಧೆಯಿಂದ ದೇವರನ್ನು ಕಾಣಬೇಕು ಎಂದರು.

### 50 ಲ.ರೂ. ಅನುದಾನ

ವಿಷ್ಣು ಯುವಕ ಮಂಡಲ ಹಾಗೂ ಗ್ರಾಮಸ್ಥರ ಬೇಡಿಕೆಗೆ ಸ್ಪಂದಿಸಿ ಕೆಮ್ಮಾಯಿ-ಬೀರ್ನಹಿತ್ಲು ಎಣಿಮೊಗರು ಮತ್ತು ಶಾಂತಿಗೋಡು ಗ್ರಾಮದ ಆನಡ್ಕ- ಪುಂಡಿಕಾಯಿ ರಸ್ತೆಗೆ ತಲಾ 50 ಲಕ್ಷ ರೂ. ಅನುದಾನ ನೀಡುವುದಾಗಿ ಭರವಸೆ ನೀಡಿದರು.




ಕಾರ್ಯಕ್ರಮದಲ್ಲಿ ಡಾ| ಅಶೋಕ್ ಪಡಿವಾಳ್ ಮಾತನಾಡಿದರು.

**ಭಜನೆ**

**ಮಧ್ಯಾಹ್ನ ಸಿಡಿಮದ್ದು ಪ್ರದರ್ಶನ, ಅನ್ನಸಂತರ್ಪಣೆ, ಸಂಜೆ ಶ್ರೀ ಮಹಾವಿಷ್ಣುಮೂರ್ತಿ ಭಜನ ಮಂಡಳಿ ಕೆಮ್ಮಾಯಿ ಹಾಗೂ ಶಾರದಾ ಭಜನ ಮಂದಿರದ ವತಿಯಿಂದ ಭಜನೆ ನಡೆಯಿತು.**

### ಭಕ್ತಿಯು ಬಂಧನವಾದಾಗ ಶಕ್ತಿ

ಉದ್ಯಮಿ ಅಶೋಕ್ ಕುಮಾರ್ ರೈ ಕೆ.ಎಸ್. ಮಾತನಾಡಿ, ಎಲ್ಲರ ಭಕ್ತಿ ಒಂದೇ ಕಡೆ ಬಂಧನವಾದಾಗ ಅದು ಶಕ್ತಿಯಾಗಿ ಪರಿವರ್ತನೆಗೊಳ್ಳಲಿದೆ. ಪೂಜೆ ಪುನಸ್ಕಾರ ಮಾಡುವುದಕ್ಕಿಂತ ನಮ್ಮ ತಂದೆ- ತಾಯಿಯನ್ನು ಮೊದಲು ಪೂಜಿಸುವುದು ನಮ್ಮ ಕರ್ತವ್ಯ, ಅದೇ ಧರ್ಮ ಎಂದರು.

ಡಾ| ಅಶೋಕ್ ಪಡಿವಾಳ್ ಮಾತನಾಡಿ, ಸಮಾಜದಲ್ಲಿ ಸೇವೆ ಮಾಡುವುದೇ ಧರ್ಮ, ಪರೋಪಕಾರವೇ ಪುಣ್ಯದ ಕೆಲಸ ಎಂದರು.

ಯುವಜನ ಒಕ್ಕೂಟದ ಜಿಲ್ಲಾಧ್ಯಕ್ಷ ಸುರೇಶ್ ಕುಮಾರ್ ರೈ ಸೂಡಿಮುಳ್ಳು, ನಗರಸಭೆ ಹಿರಿಯ ಆರೋಗ್ಯ ಅಧಿಕಾರಿ ರಾಮಚಂದ್ರ ಕೆ., ನಗರಸಭಾ ಸದಸ್ಯ ಸುಂದರ ಪೂಜಾರಿ ಬಡಾವು ಉಪಸ್ಥಿತರಿದ್ದರು.

### ಸಮ್ಮಾನ

ಸುವರ್ಣ ವಾಹಿನಿಯ ಡ್ಯಾನ್ಸ್ ವಿಜೇತೆ ದೀಕ್ಷಾ ಡಿ. ರೈ ಅವರನ್ನು ಸಮ್ಮಾನಿಸಿ, ನೃತ್ಯ ತಿಲಕ ಬಿರುದು ಪ್ರದಾನ ಮಾಡಲಾಯಿತು. ಹಸೈನಾರ್ ಕೆಮ್ಮಾಯಿ ಅವರನ್ನು ಸಮ್ಮಾನಿಸಲಾಯಿತು. ಇತ್ತೀಚೆಗೆ ನಿಧನರಾದ ಕೆಮ್ಮಾಯಿ ಶ್ರೀ ಮಹಾವಿಷ್ಣುಮೂರ್ತಿ ಭಜನ ಮಂಡಳಿ ಸದಸ್ಯ ಮಹಾಲಿಂಗ ಪಾಟಾಳಿ ಮೂಡಾಯೂರು ಮತ್ತು ಅ
ಪುತ್ರ ನಾರಾಯಣ ಪಾಟಾಳಿ ಅವ
ಶ್ರದ್ಧಾಂಜಲಿ ಅರ್ಪಿಸಲಾಯಿತು. ಸ
ಕಾರ್ಯಕ್ರಮದ ಬಳಿಕ ಬೆದ್ರ ನಮ್ಮ ಕಲಾ
ರಿಂದ 'ಉಲಾಯಿ- ಪಿದಾಯಿ' ತು
ನಾಟಕ ಪ್ರದರ್ಶನಗೊಂಡಿತು.

ಯುವಕ ಮಂಡಲದ ನಿಕಟಪೂ
ಸಂಚಾಲಕ ಸುಧೀಂದ್ರ ಬೇಕಲ್ ವ
ವಾಚಿಸಿದರು. ಪವನ್ ಕುಮಾರ್ ಕೆಮ್ಮಾ
ಪ್ರಾರ್ಥಿಸಿ, ಯುವಕ ಮಂಡಲ ಸ
ಪ್ರಶಾಂತ್ ಗೌಡ ಸ್ವಾಗತಿಸಿದರು. ವಿ
ಯುವಕಮಂಡಲದಪ್ರಧಾನಕಾರ್ಯದ
ಚಂದ್ರಶೇಖರ್ ಕೆಮ್ಮಾಯಿ ವಂದಿಸಿದ
ಪ್ರಶಾಂತ್ ಗೌಡ ಕೆಮ್ಮಾಯಿ, ನಾಗೇ
ಟಿ.ಎಸ್. ಕಾರ್ಯಕ್ರಮ ನಿರೂಪಿಸಿದ
ಕಾರ್ಯಕ್ರಮದ ಕೊನೆಯಲ್ಲಿ ಅದೃಷ್ಟ ಚೀ
ಫಲಿತಾಂಶ ನಡೆಯಿತು.

ಸುವಾನ್ ಫ್ರೆಂಡ್ಸ್ ಅಶ್ವ ಫ್ರೆಂ
ಬೀರ್ನಹಿತ್ಲು ಸ್ವಸಹಾಯ ಸಂಘಗಳ
ಬಜರಂಗದಳ ಮತ್ತು ವಿಹಿಂಪ, ಆಟೋರಿ
ಚಾಲಕ -ಮಾಲಕ ಸಂಘ ಹಾಗೂ ಗ್ರಾಮಸ್ಥ
ಸಹಕಾರದಲ್ಲಿ ಕಾರ್ಯಕ್ರಮ ಜರಗಿತು.